ಹಾರ್ಸ ಮುನಸಿಫ್ ಕೋರ್ಟು.

Original Suit No. 609 of 1891.

ವಾದಿ.	ಪ್ರತಿವಾದಿ.
ಮಂಜರಾಬಾದ್ ತಾಲ್ಲೂಕು ಬೆಳಗೋಡು ಕಲ್ಲುಮಠದ ಗುರುಖಾದ ದೇಶಿಕೇಂದ್ರರು	ಮಂಜರಾಬಾದ್ ತಾಲ್ಲೂಕು ಬಾಳಗೋಡಿನಲ್ಲಿರುವ ಪಟೇಲ್ ಮಲ್ಲೇಗವ್ಡ

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ.

ಮಂಜರಾಬಾದ್ ತಾಲ್ಲೂಕು ಬಾಳಗೋಡು ಮಠದ ಮುಪ್ಪೀರ ದೇಶಿಕೇಂದ್ರರೆಂಬ ಗುರುಗಳ ಆಸ್ತಿಗೆ ವಾದಿಯೇ ವಾರಸ್‌ದಾರನೆಂತಲೂ ಅವುಗಳನ್ನು ಬರವಾಡಿಕೊಡಬೇಕೆಂತಲೂ ಕೋರ್ಟಿನಲ್ಲಿ ದಾವಾ ತಂದಿರುವದ್ದರಿಂದ ಸದರಿಯವರ ಆಸ್ತಿಗೆ ಯಾರಾದರೂ ಹಕ್ಕು ದಾರರಿದ್ದರೆ ಈ ಕೋರ್ಟು ರೂಬರೂ 1895ನೇ ಇಸವಿ ಮಾರ್ಚಿ ಮಾಹೆ 4ನೇ ದಿವಿ 11 ಘಂಟೆಗೆ ಹಾಜರಾಗಬೇಕು.

6—2—95ನೇ ತಾರೀಖಿನಲ್ಲಿ ಕೋರ್ಟು ವೊಹರ್‌ನಿಂ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಮಿಸ್ಟರ್ ಹಂಜಾಹುಸೇನ್,
ಮುನಸಿಫ್.

ತಾರೀಖು 25—1—95.

1894ನೇ ಇಸವಿ ಡಿಸೆಂಬರ್ ತಾರೀಖು 16ನೇ ದಿನ ಶಿವಮೊಗ್ಗಾ ಡಿಸ್ಟ್ರಿಕ್ಟ್ ಶಿಕಾರಿಪುರ ತಾಲ್ಲೂಕು ತಡಸನಹಳ್ಳಿ ಗ್ರಾಮದ ಒಂದು ತೋಟದಲ್ಲಿ ತಡಸನಹಳ್ಳಿ ವಾಸಸ್ಥನಾದ ವಡ್ಡರ ದಾಸಯಂಬುವನನ್ನು ಖೂನ ಮಾಡಿ ಫರಾರಿ ಆಗಿರುವ ಆಸಾಮಿಗಳ ಚಹರೆ ಪಟ್ಟಿ.

ಶಿಕಾರಿಪುರ ತಾಲ್ಲೂಕು ಕ್ರೈಂ ನಂಬರ್ 33—94—95.

I.

ಆಪರಾಧಿ ಹೆಸರು	ದುರ್ಗದವರ ಬಸಲಿಂಗ
ತಂದೆ ಹೆಸರು	ನಾಗಣ್ಣ
ವಾಸಸ್ಥಳ	ತಡಸನಹಳ್ಳಿ—ಶಿಕಾರಿಪುರ ತಾಲ್ಲೂಕು ಶಿವಮೊಗ್ಗಾ ಡಿಸ್ಟ್ರಿಕ್ಟು.
ಜಾತಿ	ಹಿಂದೂ ಶಿವಾಚಾರ
ವಯಸ್ಸು	30 ವರುಷ
ಯತ್ಕ	5 ಅಡಿ 3 ಅಂಗ್ಲ
ಬಣ್ಣ	ಬಿಳಿ ಕೆಂಪು

ಗುರ್ತಿಸತಕ್ಕ ಇತರ ಗುರ್ತುಗಳು.—ಸಾಧಾರಣ ಜುಟ್ಟು ಬಿಟ್ಟಿದ್ದಾನೆ—ಸಂಣಕೆ ವಿಾಕಿ ಬಿಟ್ಟಿದ್ದಾನೆ—ಅಗಲವಾದ ಮುಖ—ಹಣೆ ಉಬ್ಬು—ಸಾಧಾರಣ ಬಿಳಿ ಹಲ್ಲು—ಸಾಧಾರಣವಾದ ಆಳು—ಜಲ್ದ ನಡಿಗೆ—ಹೊಟ್ಟೇ ಮೇಲೆ ಕೂದಲು—ಕೊರಳಲ್ಲಿ ಕೆಂಪು ವಸ್ತ್ರದಿಂದ ದೇವರು ಕಟ್ಟಿರ್ತಾನೆ—ಕೆಂಪು ಬಟ್ಟೆ ನೂಲಂಚಿನ ಧೋತ್ರ ಹೊದಿಯುತ್ತಾನೆ—ಬಿಳೀ ಕರೆ ನೂಲು ಕೂಡಿದ ಗಿಂಟಿನ ಅಂಗಿ ಧರಿಸುತ್ತಾನೆ—ಜಾಡಿ ಕೆಂಬಳಿ ಹೊದಿಯುತ್ತಾನೆ—ಸೊಂಟಕ್ಕೆ ಪಂಜೆ ಕಟ್ಟುರುತ್ತಾನೆ—ಎರಡು ಕಿವಿಯಲ್ಲಿಯೂ ಭಂಗಾರದ ಹತ್ತೊಂಟಿ ಬಾವಲಿ ಸಹ ಇದೆ—ಇವನ ಸಂಬಂಧೀಕರು ಶಿಕಾರಿಪುರ ತಾಲ್ಲೂಕಿನಲ್ಲಿಯೂ ಧಾರವಾಡ ಜಿಲ್ಲಾ ಹಿರೇಕೆರೂರು ತಾಲ್ಲೂಕಿನ ಸರಹದ್ದಿನಲ್ಲಿಯೂ ಇದ್ದಾರೆ.

II. ಹೆಸರು ಕಾನಕೆರೆಯಾನೆ ಕಿನ್ನರಿ ಬಸವಂತ.

ತಂದೆ ಹೆಸರು	..	ಶಿವಲಿಂಗಪ್ಪ
ವಾಸಸ್ಥಳ	..	ತಡಸನಹಳ್ಳಿ ಶಿಕಾರಿಪುರ ತಾಲ್ಲೂಕು ಶಿವಮೊಗ್ಗಾ ಡಿಸ್ಟ್ರಿಕ್ಟು.
ಜಾತಿ	..	ಹಿಂದೂ ಶಿವಾಚಾರ
ವಯಸ್ಸು	..	25 ವರುಷ
ಯತ್ಕ	..	5 ಅಡಿ 4 ಅಂಗಲ
ಬಣ್ಣ	..	ಕೆಂಪು

ಗುರ್ತಿಸತಕ್ಕ ಗುರ್ತುಗಳು:—ಸಂಣಕ್ಕೆ ವಿಾಕಿ ಕತ್ತರಿಸಿದ್ದಾನೆ—ದುಂಡುಮುಖ—ಅಗಲವಾದ ಹಣೆ—ದೃಢಾಂಗನಾದ ಆಳು—ಮೊಖದಮೇಲೆ ಮೈಲಿ ಕಲೆಗಳು ಇವೆ—ದಬ್ಬಣಕಾಟಿ ಬಣ್ಣದ ಅಂಚಿನ ಧೋತ್ರ ಹೊದಿಯುತ್ತಾನೆ—ಬಂದು ಕಂಬಳಿ ಇರುತ್ತೆ—ಸೊಂಟಕ್ಕೆ ನಡಕಟ್ಟು ಕಟ್ಟುತ್ತಾನೆ—ಸಂಬಂಧೀಕರು ಶಿವಮೊಗ್ಗಾ ಡಿಸ್ಟ್ರಿಕ್ಟು ಶಿಕಾರಿಪುರ ತಾಲ್ಲೂಕಿನಲ್ಲಿಯೂ ಮತ್ತು ಧಾರವಾಡ ಜಿಲ್ಲಾ ಹಿರೇಕೆರೂರು ತಾಲ್ಲೂಕಿನಲ್ಲಿಯೂ ಇರುತ್ತಾರೆ.

ವಿ. ರಾಮರಾವ್,
ಫಾ॥ ಪೊಲೀಸ್ ಅ॥ ಸೂಪರ್‌ಟೆಂಡೆಂಟ್,
ಶಿವಮೊಗ್ಗಾ ಡಿಸ್ಟ್ರಿಕ್ಟು.